# ವಿದ್ಯಾಕಾಶಿ ಕರಿಯರ್ ಅಕಾಡೆಮಿ

**ಸಮಯ : 90 ನಿಮಿಷಗಳು**

ನೊಂದಣಿ ಸಂಖ್ಯೆ :

## ಪಿಎಸ್ಐ ಪತ್ರಿಕೆ – 1

**ಪ್ರಶ್ನೆಗಳು**

**ಅಂಕಗಳು : 100**

**ಪ್ರಬಂಧ, ಭಾಷಾಂತರ & ಸಾರಾಂಶ ಬರವಣಿಗೆ,**

ಹೆಸರು :

ಮೊಬೈಲ್ ನಂ :

07-02-2021

## ಭಾಗ – I

**ಈ ಕೆಳಕಂಡ ಯಾವುದಾದರೂ ಒಂದು ವಿಷಯಕ್ಕೆ 600 ಪದಗಳು ಮೀರದಂತೆ ಪ್ರಬಂಧವನ್ನು ಬರೆಯಿರಿ.**

1. ರಾಷ್ಟ್ರೀಯ ಹೊಸ ಶಿಕ್ಷಣ ನೀತಿಯ ಮಹತ್ವ ಹಾಗೂ ಅದರ ಪರ ವಿರೋಧ ಕುರಿತು ಚರ್ಚಿಸಿರಿ.

ಅಥವಾ

2. ನಾಗರಿಕ ಸೇವೆಯ ಮೌಲ್ಯಗಳು ಹಾಗೂ ಉತ್ತಮ ಆಡಳಿತದಲ್ಲಿ ಅವುಗಳ ಪಾತ್ರ ಕುರಿತು ವಿಶ್ಲೇಷಿಸಿರಿ.

ಅಥವಾ

3. ಜಾಗತಿಕ ಪ್ರಜಾಪ್ರಭುತ್ವಕ್ಕೆ ಎದುರಾಗಿರುವ ಸವಾಲುಗಳನ್ನು ಕುರಿತು ಚರ್ಚಿಸಿರಿ.

ಅಥವಾ

4. ಕಲ್ಯಾಣ ಕರ್ನಾಟಕ ಅಭಿವೃದ್ಧಿ ಹಾಗೂ ಸವಾಲುಗಳನ್ನು ವಿಮರ್ಶಾತ್ಮಕವಾಗಿ ಚರ್ಚಿಸಿ

ಅಥವಾ

5. ರಾಜ್ಯದಲ್ಲಿ ವಿವಿಧ ಮೀಸಲಾತಿಗಾಗಿ ನಡೆಯುತ್ತಿರುವ ಹೋರಾಟಗಳು ಹಾಗೂ ಅವುಗಳ ಸಂವಿಧಾನಾತ್ಮಕ ಅವಕಾಶಗಳ ಕುರಿತು ಚರ್ಚಿಸಿ

# ಭಾಗ – II

**II.** ಈ ಕೆಳಕಂಡ ಸಾರಾಂಶವನ್ನು ಕನ್ನಡದಿಂದ ಇಂಗ್ಲೀಷಗೆ ಭಾಷಾಂತರಿಸಿ.

**Translate the following paragraph from Kannada to English.**

14ನೇ ಶತಮಾನದಿಂದ 17ನೇ ಶತಮಾನದ ವರೆಗೆ ಯುರೋಪಿನಲ್ಲಿ ಸ್ಪಷ್ಟವಾಗಿ ನಗರ ಸಂಸ್ಕೃತಿ ಬೆಳವಣಿಗೆಯಾಯಿತು. ನಗರ ಪ್ರದೇಶದ ಜನರು ಗ್ರಾಮೀಣ ಜನರಿಗಿಂತ ತಾವು ಹೆಚ್ಚು ನಾಗರಿಕರೇಂದು ತಿಳಿದುಕೊಳ್ಳಲಾರಂಭಿಸಿದರು. ಪ್ರಮುಖ ನಗರಗಳಾದ ಫ್ಲಾರೇನ್ಸ್, ವೇನ್ನಿಸ್ ಮತ್ತು ರೋಮ್‌ಗಳು ಕಲೆ ಮತ್ತು ಶಿಕ್ಷಣ ಕೇಂದ್ರಗಳಾಗಿ ರೂಪುಗೊಂಡವು. ಕಲಾವಿದರು ಹಾಗೂ ಬರಹಗಾರರು ಮತ್ತು ಶ್ರೀಮಂತರು ಮತ್ತು ಕಲಾ ಪೋಷಕರಿಂದ ಆಶ್ರಯ ಪಡೆದರು. ಮುದ್ರಣ ಯಂತ್ರದ ಸಂಶೋಧನೆಯಿಂದಾಗಿ ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿರುವ ಜನರಿಗೆ ಸಾಕಷ್ಟು ಪುಸ್ತಕಗಳು ದೊರೆತವು. ಇದು ಯುರೋಪಿನ ಜನರಿಗೆ ಪ್ರಾಚೀನ ಗ್ರೀಕ್ ಮತ್ತು ರೋಮ್‌ನ್ನರೊಂದಿಗೆ ತಮ್ಮನ್ನು ಹೋಲಿಕೆ ಮಾಡಿಕೊಳ್ಳಲು ಅನುಕೂಲ ಮಾಡಿಕೊಟ್ಟಿತು.

ಧರ್ಮವು ಕೆಲವು ವ್ಯಯಕ್ತಿಕ ನಿರ್ಧಾರಗಳನ್ನು ಆಯ್ಕೆ ಮಾಡಿಕೊಳ್ಳಲು ಜನರಿಗೆ ಅವಕಾಶ ಕಲ್ಪಿಸಿತು. ವಿಜ್ಞಾನಿಗಳು ಯುರೋಪಿಯನ್ನರು ನಂಬಿದ್ಧ ಭೂಕೇಂದ್ರಿತ ಸಿದ್ಧಾಂತದ ಬದಲಾಗಿ ಸೌರ ಕೇಂದ್ರ ಸಿದ್ಧಾಂತವನ್ನು ಸಾದರಪಡಿಸಿದರು. ಹೊಸ ಭೌಗೋಳಿಕ ತಿಳುವಳಿಕೆಯು ಮೆಡಿಟೆರಿನಿಯನ್ ಸಮುದ್ರವು ವಿಶ್ವದ ಕೇಂದ್ರವೆಂಬ ಯುರೋಪ ಕೇಂದ್ರಿತ ಸಿದ್ಧಾಂತವನ್ನು ಬದಲಾಯಿಸಿತು. ಈ ಕುರಿತಾದ ಕೆಲವು ದಾಖಲೆಗಳು ಪುಸ್ತಕಗಳು, ಚಿತ್ರಕಲೆಗಳು, ಶಿಲ್ಪಕಲೆಗಳು, ಕಟ್ಟಡಗಳು, ನೆಯ್ಗೆ ಬಟ್ಟೆಗಳು ಯುರೋಪ ಮತ್ತು ಅಮೇರಿಕಾದ ಸಂಗ್ರಹಲಾಯಗಳಲ್ಲಿ ಸಂರಕ್ಷಿಸಲ್ಪಟ್ಟಿವೆ.

ವಿದ್ಯಾಕಾಶಿ ಕರಿಯರ್ ಅಕಾಡೆಮಿ

# ಭಾಗ – III

**III. ಈ ಕೆಳಕಂಡ ಸಾರಾಂಶವನ್ನು ಇಂಗ್ಲೀಷಿನಿಂದ ಕನ್ನಡಕ್ಕೆ ಭಾಷಾಂತರಿಸಿ.**

**Translate the following paragraph from English to Kannada.**

**Agriculture is the science and art of cultivating plants and livestock. Agriculture was the key development in the rise of sedentary human civilization, whereby farming of domesticated species created food surpluses the enabled people to live in cities. The history of agriculture began thousand of years ago. After gathering wild grains beginning at least 105000 years ago, nascent farmers began to plant them around 11,500 years ago. Pigs, sheep and cattle were domesticated over 10,000 year ago. Plants were independently cultivated in at least 11 regions of the world . Industrial agriculture based on large-scale monoculture in the twentieth century came to dominate agriculture output, thousand century came to dominate agricultural output, though 2 billion people still depended on subsistence agriculture into the twenty-first.**

**Modern agronomy, plant breeding, agrochemicals such as pesticides and fertilizers, and technological developments have sharply increased yields, while causing widespread ecological and environmental damage. Selective breeding and modern practices in animal husbandry have similarly increased the output of meat , but have raised concerns about animal welfare and environmental damage. Environmental issues include contribution to global warming, depletion of aquifers , deforestation, antibiotic resistance, and growth hormones in industrial meat production. Genetically modified organisms are widely used, although some are banned in certain countries.**

**The major agricultural products can be brodely grouped into foods, fibers, fuels and raw materials (such as rubber). Food classes include cereals (grains), vegitables, fruits, oil, meat, milk, fungi and eggs. Over one-third of the world's workers are employed in agriculture, second only to the service sector , although the number of agricultural workers in developed countries has decreased**

# ಭಾಗ – IV

**II.** ಈ ಕೆಳಕಂಡ ವಿಷಯವನ್ನು ಸಂಕ್ಷೇಪಿಸಿ. 1/3 ಕ್ಕಿಂತ ಮೀರದಂತೆ ಬರೆಯಿರಿ.

ಸ್ವಾಭಾವಿಕ ಆವಾಸದಿಂದ ಹೊರಗೆ ಜೈವಿಕ ವೈವಿಧ್ಯತೆ ಸಂರಕ್ಷಣೆ
**Bio diversity Conservation – Ex situ**

ಭಾರತದಲ್ಲಿ ಜೀವ ವೈವಿಧ್ಯತೆಯಲ್ಲಿ ಅವುಗಳ ಸ್ವಾಭಾವಿಕ ಆವಾಸದಲ್ಲಿ ಅಂದರೆ ಜೀವಿನೆಲೆಯಲ್ಲಿ ರಕ್ಷಿಸುವ ಜೊತೆಗೆ, ಅವುಗಳನ್ನು ಅವುಗಳ ಜೀವಿನೆಲೆಗಳ ಹೊರಗೆ ಸಂರಕ್ಷಿಸಲೂ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ. ಇವುಗಳಲ್ಲಿ ಸಸ್ಯೋದ್ಯಾನಗಳು (Botanical Garden), ಪ್ರಾಣಿ ಸಂಗ್ರಾಲಯಗಳು (Zoo), ಜಿಂಕೆಗಳ ಉದ್ಯಾನವನ, ಸಫಾರಿ ಪಾರ್ಕ್ ಹಾಗೂ ಆಕ್ವೇರಿಯಾಗಳು ಅತಿ ಮುಖ್ಯವಾದವು. ಇದಕ್ಕಾಗಿ ದೇಶದಾದ್ಯಂತ ಕೇಂದ್ರ ಮತ್ತು ರಾಜ್ಯ ಸರಕಾರಗಳು 70 ಸಸ್ಯೋದ್ಯಾನಗಳನ್ನು ( Botanical garden ) ನಿರ್ವಹಿಸುತ್ತಿವೆ. ಇವುಗಳಲ್ಲಿ ಕೆಲವು ವಿಶ್ವವಿದ್ಯಾನಿಲಯಗಳು ತಮ್ಮದೇ ಆದ ಸಸ್ಯೋದ್ಯಾನಗಳನ್ನು ಹೊಂದಿದ್ದು, ಅವುಗಳಲ್ಲಿ ವಿವಿಧ ಬಗೆಯ ಸಸ್ಯಗಳನ್ನು ಅಧ್ಯಯನಕ್ಕಾಗಿ ಬೆಳೆಸಲಾಗಿದೆ.

ಭಾರತದಲ್ಲಿ ಒಟ್ಟು ಸುಮಾರು 275 ಪ್ರಾಣಿ ಸಂಗ್ರಹಲಯಗಳಿದ್ದು, ಇವುಗಳಲ್ಲಿ ಪ್ರಾಣಿಗಳ ವೈವಿಧ್ಯತೆಯನ್ನು ಕಾಪಾಡಲಾಗುತ್ತಿದೆ, ಜೊತೆಗೆ ಜಿಂಕೆಯ ಪಾರ್ಕುಗಳು, ಸಫಾರಿ ಪಾರ್ಕುಗಳು ಹಾಗೂ ಮತ್ಸ್ಯ ಪ್ರಾಣಿ ಸಂಗ್ರಾಹಾಲಯ ಪ್ರಾಧಿಕಾರವನ್ನು ಸ್ಥಾಪಿಸಲಾಗಿದೆ.

ಮೇಲಿನ ವಿವಿಧ ಬಗೆಯ ಜೀವ ವೈವಿಧ್ಯತೆ ಸಂರಕ್ಷಣಾ ಕಾರ್ಯಕ್ರಮಗಳ ಜೊತೆಗೆ ತೇವಯುತ ಜೌಗು ವಲಯ, ಮ್ಯಾಂಗ್ರೂವ್ ಹಾಗೂ ಹವಳದಿಣ್ಣೆಗಳ ನಿರ್ವಹಣೆಗೂ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ, ಜೌಗುವಲಯ ನಿರ್ವಹಣೆಗೆ ಹಿಮಾಚಲ ಪ್ರದೇಶದ ಪೊಂಗ್ ಅಣೆಕಟ್ಟು ಪ್ರದೇಶ, ಕಾಶ್ಮೀರದ ವೂಲಾರ್ ಸರೋವರ, ಮಣಿಪುರದ ಲೋಕ್‌ಟಕ್ ಸರೋವರ, ತ್ರಿಪುರದ ರುದ್ರಸಾಗರ್ ಸರೋವರ ಹಾಗೂ ಆಂಧ್ರಪ್ರದೇಶದ ಕೊಲ್ಲೇರು ಸರೋವರಗಳನ್ನು ಆಯ್ಕೆ ಮಾಡಲಾಗಿದೆ. ಇದೇ ರೀತಿಯಲ್ಲಿ ಮ್ಯಾಂಗ್ರೂವ್ ಮತ್ತು ಹವಳದಿಣ್ಣೆಗಳ ಜೀವಿಪರಿಸರ ವ್ಯವಸ್ಥೆಯ ನಿರ್ವಹಣೆಗೂ ವಿಶೇಷ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ.